**ದಿ : 06-04-2026** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ. ಸದರಿ ಪ್ರಮಾಣಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಅದರಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

ಮುಂದುವರಿದ ಮುಖ್ಯ ವಿಚಾರಣೆ:- ಅರ್ಜಿದಾರರ ಪರ ವಕೀಲರಿಂದ:

ಸಾಕ್ಷಿಯು ಅರ್ಜಿದಾರನ ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ-15 ಎಂದು ಗುರುತಿಸಲಾಗಿದ್ದು, ಅದರ ಮೇಲಿನ ಸಾಕ್ಷಿ ಸಹಿಯನ್ನು ನಿ.ಪಿ-**15**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಅರ್ಜಿದಾರನ ಕೇಸ ಶೀಟನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅರ್ಜಿದಾರನ ಕೇಸ ಶೀಟನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿ.ಪಿ-**17** ಎಂದರೆ ಸರಿಯಲ್ಲ.

ಪಾಟೀ ಸವಾಲು : 2 ನೇ ಎದುರುದಾರರ ಪರ ವಕೀಲರಾದ ಶ್ರೀ ಕೆ ಎಸ್ ಎ ರವರಿಂದ

ಮೋಟಾರ್ ಸೈಕಲ್ ಸವಾರ ಅಥವಾ ಹಿಂಬದಿ ಸವಾರ ಹೆಲ್ಮೇಟ ಧರಿಸದೆ ಪ್ರಯಾಣಿಸುವಾಗ ಅಪಘಾತವಾಗಿ ಅವರ ತಲೆಯು ಗಟ್ಟಿನೆಲದ ಮೇಲೆ ಬಿದ್ದಾಗ subdural hematoma ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಅರ್ಜಿದಾರನ ಎಡಕೈಗೆ ಆಗಿದ್ದ ಗಾಯಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ಚಿಕಿತ್ಸೆ ನೀಡಿರುವುದಿಲ್ಲ. ಅರ್ಜಿದಾರನಿಗೆ ಆಗಿದ್ದ ಬೆನ್ನು ಹುರಿಯ ಮುರಿತಕ್ಕೆ ಸಂಬಂಧಿಸಿದಂತೆ pedecal screw stabilization ಮಾಡಿರುತ್ತೇನೆ. ಸದರಿ ವಿಧಾನವು ಇತರೆ ವಿಧಾನಗಳಿಗಿಂದ ನವೀನ ಮತ್ತು ಹೊಸ ವಿಧಾನ ಎಂದರೆ ಸರಿ. ಸದರಿ ಪಿ ಎಸ್ ಎಸ್ ವಿಧಾನದ ಶಸ್ತ್ರ ಚಿಕಿತ್ಸೆಯಲ್ಲಿ ನೋವು ಮತ್ತು ರಕ್ತಸಾವ್ರ ಕಡಿಮೆ ಇರುತ್ತದೆ ಎಂದರೆ ಸರಿ. ಸದರಿ ಚಿಕಿತ್ಸೆ ಮಾಡಿದಾಗ ಗಾಯಾಳು ಹೆಚ್ಚಿನ ಪ್ರಮಾಣದಲ್ಲಿ ಗುಣಮುಖನಾಗುವ ಸಾಧ್ಯತೆ ಇದೆ ಎಂದರೆ ಸರಿ. ಅದೇ ರೀತಿ ಶಸ್ತ್ರ ಚಿಕಿತ್ಸೆಯ ನಂತರ ಗಾಯಾಳುವಿಗೆ ಕಡಿಮೆ ಪ್ರಮಾಣದ ಚಿಕಿತ್ಸೆ ಇರುತ್ತದೆ ಎಂದರೆ ಸರಿ. ಸದರಿ ವಿಧಾನದ ಮೂಲಕ ಅಳವಡಿಸಿದ screw ಗಳು ಶಾಶ್ವತವಾಗಿ ದೇಹದಲ್ಲಿ ಇರುತ್ತವೆ.

ಬೆನ್ನುಹುರಿಗೆ ಆದ ಗಾಯ ಮತ್ತು ಅದಕ್ಕೆ ಸಂಬಂಧಿಸಿದಂತೆ ಮಾಡಿದ ಪಿ ಎಸ್ ಎಸ್ ಶಸ್ತ್ರ ಚಿಕಿತ್ಸೆಯಿಂದ ಗಾಯಾಳುವಿನ ಬುದ್ಧಿಮಟ್ಟ ಮತ್ತು ವಿದ್ಯಾಭ್ಯಾಸಕ್ಕೆ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಆಗಿದ್ದ retro-grate amentia ಎಲ್ಲಿಯವರೆಗೆ ಇರುತ್ತದೆ ಮತ್ತು ಯಾವಾಗ ವಾಸಿಯಾಗುತ್ತದೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಆಹಾರವನ್ನು ಅಗಿಯಲು ಕಷ್ಟವಾಗುವುದು ಮತ್ತು ನೋವು ನರ ಅಂಗನ್ಯೂನ್ಯತೆ ಗೆ ಸಂಬಂಧಪಡುವುದಿಲ್ಲ. ಅರ್ಜಿದಾರನ ಕೆಲಸದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಕೇಂದ್ರ ಸರ್ಕಾರ ಹೊರಡಿಸಿರುವ ಅಧಿಸೂಚನೆ ಮತ್ತು ನಿಯಮಗಳಿಗೆ ಅನುಗುಣವಾಗಿ ಅಂಗನ್ಯೂನ್ಯತೆ ನಿರ್ಧರಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನಿಗೆ

ಆಗಿರುವ ಅಂಗನ್ಯೂನ್ಯತೆ ಯು ಇಡಿ ದೇಹಕ್ಕೆ ಹೊಲಿಸಿದಾಗ ಭಾಗಶಃ ಮತ್ತು ಶಾಶ್ವತ ಆಗಿರುತ್ತದೆ. ಅರ್ಜಿದಾರನಿಗೆ ಇಡಿ ದೇಹಕ್ಕೆ ಶೇಕಡಾ 18 ರಷ್ಟು ಅಂಗನ್ಯೂನ್ಯತೆ ಆಗದೇ ಇದ್ದರೂ ಸಹ ಆತನ ಮಾತು ಕೇಳಿ ಹೆಚ್ಚಿನ ಪರಿಹಾರ ದೊರೆಯಲಿ ಎಂದು ಹೆಚ್ಚಿನ ಪ್ರಮಾಣದ ಅಂಗನ್ಯೂನ್ಯತೆ ಕಾಣಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> **: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಸದಸ್ಯರು, ಹೆಚ್ಚುವರಿ ಮೋಟಾರು ವಾಹನ
ಅಪಘಾತ ಪರಿಹಾರ ಮಂಡಳಿ, ಕುಂದಾಪುರ